ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ
ನ್ಯಾಯಾಲಯ ಮೂಡಬಿದಿರೆ

ಸಿಸಿ ನಂ. 109/2021,

ಚಾಸಾ-3 , ಪ್ರಾಸಾ -3

| | |
|---|---|
| ಹೆಸರು | ಅವೀಶ್ ಸಲ್ಡಾನ್ |
| ತಂದೆಯ ಹೆಸರು | ಹೆರಾಲ್ಡ್ ಸಲ್ಡಾನ |
| ವಯಸ್ಸು | 37 ವರ್ಷ |
| ಕೆಲಸ | ಸ್ವಯಂ ಉದ್ಯೋಗಿ |
| ವಾಸ | ಜ್ಯೋತಿ ನಗರ , ಮೂಡಬಿದ್ರೆ |
| ಪ್ರಮಾಣೀಕರಿಸಿದ ದಿನಾಂಕ | 02-09-2025 |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>

1. ಮೃತ ಗ್ರೇಶನ್ ಲೆಲ್ಸಿ ರೋಡ್ರಿಗಸ್ ಮತ್ತು ಪ್ರವೀಣ್ ತಾವ್ರೋ ರವರು ಗೊತ್ತು . ಆರೋಪಿತರು ಗೊತ್ತು . 1ನೇ ಆರೋಪಿ ಗೊತ್ತು . ಈ ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ . ಪೊಲೀಸರ ಕೋರಿಕೆಯ ಮೇರೆಗೆ ನಿಪಿ-11ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ . ಸಾಕ್ಷಿ ನಿಪಿ-11 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-11(ಬಿ) ಎಂದು ಗುರುತಿಸಲಾಯಿತು . ಸದರಿ ಸಮಯದಲ್ಲಿ ಯಾವುದೇ ಸ್ವತ್ತುಗಳನ್ನು ಸ್ವಾಧೀನ ಪಡಿಸಿಕೊಂಡಿರುವುದಿಲ್ಲ. ಮಹಜರನ್ನು ಯಾವ ದಿನ ಯಾರ ಸಮಕ್ಷಮದಲ್ಲಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ .

*(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ವಿಚಾರಣೆ ಮಾಡಲು ಮಾನ್ಯ ಸ ಸ ಅ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)*

<u>ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ</u>

ದಿಃ 28-03-2018 ರಂದು ಚಾಸಾ-1 ರವರು ಠಾಣೆಗೆ ಕರೆ ಮಾಡಿ ಬರುವಂತೆ ತಿಳಿಸಿದ ಮೇರೆಗೆ ನಾನು ಠಾಣೆಗೆ ಹೋದಾಗ , ನನ್ನ ಪರಿಚಯದ ಚಾಸಾ-2 ರವರು ಅಲ್ಲಿ ಇದ್ದರು ಎಂದರೆ ಸರಿಯಲ್ಲ . ನಮ್ಮಿಬ್ಬರಿಗೆ ಚಾಸಾ-1 ರವರು ಮಂಗಳೂರು ತಾಲೂಕು ಕರಿಂಜೆ ಗ್ರಾಮದ ಹರಿಹಂತ ಕಾಂಪೌಂಡ್ ನ ಅರಮನೆ ಸಂಕಪ್ಪ ಶೆಟ್ಟಿಯವರ ಗದ್ದೆಯಲ್ಲಿ ಕಾಡು ಪ್ರಾಣಿಗಳನ್ನು ..................................................................................................................................................................................

1ನೇ ಆರೋಪಿಯು ಬಿದಿರಿನ ದೊಂಟಿಯನ್ನು ತೋರಿಸಿ , ಸ್ವಾಧೀನ ಮಹಜರ್ ಕ್ರಮ ಜರುಗಿಸುವಾಗ ಸ್ಥಳದಲ್ಲಿಯೇ ಹಾಜರಿದ್ದು 12-15 ಗಂಟೆಯಿಂದ 12-45 ಗಂಟೆಯವರೆಗೆ ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಮಾಡಲಾದ ಮಹಜರಿಗೆ ಸ್ಥಳದಲ್ಲಿ ಹಾಜರಿದ್ದು ಸಹಿ ಮಾಡಿ , ನನ್ನ ಹೇಳಿಕೆಯನ್ನು ನೀಡಿರುತ್ತೇನೆ . ಸಾಕ್ಷಿ ಹೇಳಿಕೆಯನ್ನು ಅಲ್ಲಗಳೆದ ಕಾರಣ ಹೇಳಿಕೆಯನ್ನು ನಿಪಿ-29 ಎಂದು ಗುರುತಿಸಲಾಯಿತು . ಮು.ಮಾ-13 ನ್ನು ಯಾವ ಕಾರಣಕ್ಕಾಗಿ ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ಪ್ರಕರಣದ ಬಗ್ಗೆ ತಿಳಿದಿದ್ದರೂ ಸಹ ಆರೋಪಿತರು ಊರಿನವರಾಗಿರುವ ಕಾರಣ , ಅವರೊಂದಿಗೆ ಸೇರಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀಸವಾಲುಃ ಆರೋಪಿಗಳ ಪರ ವಕೀಲರು ಪಾಟೀಸವಾಲು ಇಲ್ಲವೆಂದು ತಿಳಿಸಿರುತ್ತಾರೆ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

ವ್ಯ ನ್ಯಾ.ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ